೬) ಕರ್ನಾಟಕ ಸಾರ್ವಜನಿಕ ಸ್ಥಳಗಳ (ಅಕ್ರಮ ಅಧಿಭೋಗದಾರರ ಹೊರಹಾಕ ಲಾರೆ) (ತಿದ್ದುಪಡಿ) ವಿಧೇಯಕ ೧೯೮೬.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮಂತ್ರಿ ಸಂಸದೀಯ ಸಚಿವರು) (ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸಾರ್ವಜನಿಕ ಸ್ಥಳಗಳ (ಅಕ್ರಮ ಅಧಿಭೋಗ ದಾರರ ಹೊರ ಹಾಕಲಾತಿ) (ತಿದ್ದುಪಡಿ) ವಿಧೇಯಕ ೧೯೮೬ನ್ನು ಪರ್ಯಾಲೋಚಿಸಬೇಕೆಂದು ಮನವಿ ಮಾಡುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು.

ಶ್ರೀ ಎ.ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮಂತ್ರಿ ಸಂಸದೀಯ ಸಚಿವರು).—ಮಾನ್ಯ ಅಧ್ಯಕ್ಷರೇ ಈ ವಿಧೇಯಕದಲ್ಲಿ ಹಿಂದಿನ ಕಾನೂನು ಪ್ರಕಾರ "ಎ" ದರ್ಜೆಯ ಅಧಿಕಾರ ಕ್ರಮ ತೆಗೆದುಕೊಳ್ಳ ಬೇಕೆಂದು ಇತ್ತು. ಆದರೆ ಅವರಿಗೆ ಕಾಲಾವಕಾಶ ಇಲ್ಲದೆ ಇರುವುದರಿಂದ ಇದು ಸರಿಯಾಗಿ ನಡೆಯುತ್ತಿಲ್ಲವಾದ್ದರಿಂದ ಈ ಅಧಿಕಾರವನ್ನು ಈಗ "ಬಿ" ದರ್ಜೆಯ ಅಧಿಕಾರಿಗೆ ಅವಕಾಶ ಮಾಡಿದ್ದೇವೆ. ಆದ್ದರಿಂದ ದಯಮಾಡಿ ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಅಧ್ಯಕ್ಷರೇ, ನಾನು ಇದನ್ನು ಹೆಚ್ಚು ವಾಡಿ, ಬೆಳೆಸುವುದಕ್ಕೆ ಇಚ್ಛೆಪಡುವುದಿಲ್ಲ. ಮಾನ್ಯ ಮಂತ್ರಿಗಳು ಏನೂ ಕಾರಣ ಕೊಟ್ಟಿದ್ದಾರೆ, ಇಂತಹ ಕಾರಣಗಳನ್ನು ಕೊಟ್ಟು, ಮಸೂದೆಯನ್ನು ಬದಲಾವಣೆ ಮಾಡತಕ್ಕಂಥ ಈ ಒಂದು ಪರಿಪಾಠ ಏನಿದೆ. ಇದು ಸರಿಯಾಗಿರುವುದಿಲ್ಲ. ಏಕೆಂದರೆ, ನಾವು ಸದನದಲ್ಲಿ ಮಸೂದೆಯನ್ನು ಮಂಜೂರ್ ಮಾಡುತ್ತೇವೆ. ಇಲ್ಲಿ ಮೊದಲನೇ ದರ್ಜೆಯ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕೆಂದು ಹೇಳುತ್ತೀರಿ. ನೀವು ಈ ಜವಾಬ್ದಾರಿಯ ಪ್ರಮಾಣ ಏನಾದರೂ ಕಡಿಮೆ ಮಾಡುತ್ತೀರಾ? ಇದರ ಅರ್ಥ ಏನಾಗುತ್ತದೆ ಎಂದರೆ ಜವಾಬ್ದಾರಿ ಪ್ರಮಾಣ ತಮಗೂ ಗೊತ್ತಿದೆ. ಇಂತಹವರಿಂದ ಬಹಳ ಮಿಸ್‌ಯೂಸ್ ಆಗುತ್ತದೆ. ನೀವು ಈ ಮಸೂದೆಯನ್ನು ಪಾಸ್ ಮಾಡಬೇಕೆಂದು ಹೇಳಿದ್ದೀರಿ. ಇದರಿಂದ ಅನಾಹುತವಾಗುತ್ತದೆ ಬಡವರಿಗೆ ಪೀಡನೆಯಾಗುತ್ತದೆಂದು ಹೇಳುತ್ತಿದ್ದೆನೆ ಇದನ್ನು ಡೈಲೂಟ್ ಮಾಡಿಕೊಂಡು ಕೆಳಗಿನ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ಕೊಡುವುದರಿಂದ, ಬಹಳ ತೊಂದರೆ ಯಾಗುತ್ತದೆ. ತಾವು ಅನುಭವದ ಮೇಲೆ ಎಂದು ಹೇಳುತ್ತೀರಿ ಯಾವ ಅನುಭವದ ಮೇಲೆ ನಾನು ತಮಗೆ ಒಂದು ಉದಾಹರಣೆ ಕೊಡುತ್ತೇನೆ. ಈ ಈ ಮಸೂದೆಯನ್ನು ಮಂಜೂರ್ ಮಾಡಿದ್ದೇ ಇತ್ತೀಚೆಗೆ. ಎಷ್ಟು ಕೇಸುಗಳು ಪೆಂಡಿಂಗ್ ಇವೆ. ಕಾರ್ಯ ನಿರ್ವಹಿಸುವುದಕ್ಕೆ ಏಕೆ ಆಗಿಲ್ಲ? ಹೆಚ್ಚು ಕೆಲಸವಾಗುತ್ತದೆಂದು ಕೆಳಗಿನ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ಕೊಡುವುದಕ್ಕೆ ನೀವು ಹೇಳತಕ್ಕ ಕಾರಣ ಸರಿಯಾದ ಕಾರಣವಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್,—ಮಾನ್ಯ ಅಧ್ಯಕ್ಷರೇ, ಮೊದಲು ಪ್ರಾರಂಭದಲ್ಲಿ ಈ ಕಾನೂನ ಬಂದಾಗ, ಮೊದಲನೇ ದರ್ಜೆ ಅಧಿಕಾರಿಗಳಿಗೆ ಈ ಕಾನೂನಿನ ಆಡಿಯಲ್ಲಿ ಅಧಿಕಾರವನ್ನು ಚಲಾಯಿಸ ತಕ್ಕಂಥ, ಅಧಿಕಾರವನ್ನು ಕೊಡಲಾಗಿತ್ತು. ಅನಧಿಕೃತ ಕಟ್ಟಡಗಳು ಅಥವಾ ಇತರೆ ಕೆಲಸಗಳನ್ನು ಹೆಚ್ಚು ಜವಾಬ್ದಾರಿಯಿಂದ ನೋಡಿಕೊಳ್ಳಲು ಈ ಅಧಿಕಾರವನ್ನು ಮೊದಲನೇ ದರ್ಜೆ ಅಧಿಕಾರಿಗಳಿಗೆ ಕೊಟ್ಟಿತ್ತು ಎನ್ನುವ ವಾತಾವರಣವನ್ನು ಮಾನ್ಯ ಮೊಯ್ಲಿಯವರು ಹೇಳಿದ್ದಾರೆ. ಅವರಿಗಿಂತಲೂ ಕಡಿಮೆ ದರ್ಜೆಯವರಿಗೆ ಕೊಟ್ಟರೆ, ಸಣ್ಣದರ್ಜೆಯ ಅಧಿಕಾರಿಗಳು, ಈ ಕಾನೂನನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸದೇ ತೊಂದರೆ ಕೊಡುವಂತಾದ ಸನ್ನಿವೇಶಗಳು ಬರಬಹುದೆಂಬ ಸಂಶಯವನ್ನು ವ್ಯಕ್ತ ಪಡಿಸಿದ್ದಾರೆ. ಸ್ವಲ್ಪಮಟ್ಟಿಗೆ ಅವರ ಸಂಶಯಕ್ಕೆ ಕಾರಣಗಳು ಇವೆಯೆಂದು ನಾನು ಅಂದುಕೊಂಡಿದ್ದೇನೆ ನಾನು ಆಶ್ವಾಸನೆಯನ್ನು ಕೊಡುತ್ತೇನೆ. ಅಂಥಾದ್ದನ್ನು ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ, ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಅಧ್ಯಕ್ಷರು —ಪ್ರಸ್ತಾವ ಏನೆಂದರೆ ''ಕರ್ನಾಟಕ ಸಾರ್ವಜನಿಕ ಸ್ಥಳಗಳ (ಅಕ್ರಮ ಅಧಿಭೋಗ ದಾರರ ಹೊರ ಹಾಕಲಾತಿ)(ತಿದ್ದುಪಡಿ) ವಿಧೇಯಕ ೧೯೮೬'' ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ ೨.

ಅಧ್ಯಕ್ಷರು.—ಏನೇ ಖಂಡವು ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೨ನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ಮೊದಲನೇ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧ್ಯಯನಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದದನೇ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧ್ಯಯನಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಹಾಗೂ ಆಹಾರ ಖಾತೆ ಸಚಿವರು) (ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸಾರ್ವಜನಿಕ ಸ್ಥಳ (ಅಕ್ರಮ ಅಧಿಭೋಗದಾರರ ಹೊರ ಹಾಕಲಾತಿ) (ತಿದ್ದುಪಡಿ) ವಿಧೇಯಕ ೧೯೮೬ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು,—ಪ್ರಸ್ತಾವ ಏನೆಂದರೆ, ''ಕರ್ನಾಟಕ ಸಾರ್ವಜನಿಕ ಸ್ಥಳಗಳ (ಅಕ್ರಮ ಅಧಿಭೋಗ ದಾರರ ಹೊರ ಹಾಕಲಾತಿ) (ತಿದ್ದುಪಡಿ) ವಿಧೇಯಕ ೧೯೮೬ನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಭಾರತೀಯ ಪಾಲುದಾರಿಕೆ (ಕರ್ನಾಟಕ ತಿದ್ದುಪಡಿ) ವಿಧೇಯಕ ೧೯೮೬

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ.ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ಹಾಗೂ ಆಹಾರ ಸಚಿವರು) (ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಭಾರತೀಯ ಪಾಲುದಾರಿಕೆ (ಕರ್ನಾಟಕ ತಿದ್ದುಪಡಿ) ವಿಧೇಯಕ, ೧೯೮೬ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಭಾರತೀಯ ಪಾಲುದಾರಿಕೆ (ಕರ್ನಾಟಕ ತಿದ್ದುಪಡಿ) ವಿಧೇಯಕ ೧೯೮೬ರಲ್ಲಿ ಇಂಡಿಯನ್ ಪಾರ್ಟ್‌ನರ್‌ಷಿಪ್ (೧)ನ್ನು ತಿದ್ದುಪಡಿ ಮಾಡ